**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಓ.ಎಸ್. ನಂ.76/2019**

**ಸಿ ಡಬ್ಲ್ಯೂ-3**

| | |
|---|---|
| ಹೆಸರು | ಸಂಗಮೇಶ್ವರ್ |
| ತಂದೆಯ ಹೆಸರು | ಕುಂಡಲಿಕಪ್ಪ ಪಾಟೀಲ್ |
| ವಯಸ್ಸು | 40 |
| ಉದ್ಯೋಗ | ಚೀಪ್ ಮ್ಯಾನೇಜರ್ ಬ್ಯಾಂಕ್ ಆಫ್ ಬರೋಡ ಕರೂರು. |
| ವಾಸ | ಕರೂರು. |

**ಸಾಕ್ಷಿಯನ್ನು ದಿನಾಂಕಃ 06.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ಸಮಯದಲ್ಲಿ ಒಂದು ಅರ್ಜಿಯನ್ನು ತೆಗೆದುಕೊಳ್ಳಲಾಗುತ್ತದೆ. ಅರ್ಜಿಯನ್ನು ಪಡೆಯುವಾಗ ಅರ್ಜಿದಾರರ ಗುರುತಿನ ಚೀಟಿಯನ್ನು ಸಹ ಪಡೆದುಕೊಳ್ಳಲಾಗುತ್ತದೆ. ನನಗೆ ನ್ಯಾಯಾಲಯದಿಂದ ಬಂದ ಸಮನ್ಸ್ ನಲ್ಲಿ ವಾದಿ ಮುತ್ತುಸ್ವಾಮಿ ರವರು ಖಾತೆಯನ್ನು ತೆರೆಯವ ಸಮಯದಲ್ಲಿ ನೀಡಿದಂತಹ ಅರ್ಜಿ ಮತ್ತು ಅವರ ಗುರುತಿನ ದಾಖಲಾತಿಯನ್ನು ತರುವಂತೆ ತಿಳಿಸಲಾಗಿರತ್ತದೆ. ಆದರೆ ಸದರಿ ಮುತ್ತುಸ್ವಾಮಿ ರವರು 2015 ರಲ್ಲಿ ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿದ್ದು ಈಗ 10 ವರ್ಷಗಳು ಆಗಿರುವುದರಿಂದ ಅವರ ಎಲ್ಲಾ ದಾಖಲಾತಿಗಳನ್ನು

ನಮ್ಮ ಬ್ಯಾಂಕಿನ ಡಾಕುಮೆಂಟರಿ ಮ್ಯಾನೇಜಿಂಗ್ ಸಿಸ್ಟಮ್ ಇಲ್ಲಿಗೆ ಕಳುಹಿಸಲಾಗಿರುತ್ತದೆ. ನಮ್ಮ ಶಾಖೆಯಲ್ಲಿ ಅವರ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿದಾರರು ಪುನಃ ಅದನ್ನು ವಿಚಾರಿಸಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಿಪಿ 13 ರ ವಾದಿ ರವರ ಬ್ಯಾಂಕ್ ಆಫ್ ಬರೋಡ ಪಾಸ್ ಬುಕ್ಕಿನಲ್ಲಿ ಅವರ ತಂದೆಯ ಹೆಸರು ಇರವುದಿಲ್ಲ. ಸದರಿ ದಾಖಲಾತಿಯಲ್ಲಿ ಪೂರ್ತಿ ವಿವರ ಇರುವುದಿಲ್ಲ ಬೇಕಾದಲ್ಲಿ ನಮ್ಮ ದಾಖಲಾತಿಯನ್ನು ಪರಿಶೀಲಿಸಿ ಅವರ ತಂದೆಯ ಹೆಸರನ್ನು ತಿಳಿಸಬಹುದು. ನಿಪಿ 13 ರ ದಾಖಲಾತಿಯಲ್ಲಿ ವಾದಿರವರು ಖಾತೆಯನ್ನು ತೆರೆಯುವ ಸಮಯದಲ್ಲಿ ರೂ.500/- ಗಳನ್ನು ಠೇವಣಿ ಇಟ್ಟು ತೆರೆಯಲಾಗಿರುತ್ತದೆ ತದನಂತರ ಯಾವುದೇ ವ್ಯವಹಾರ ಆಗಿರುವುದಿಲ್ಲ. ಸಾಕ್ಷಿಯು ವಾದಿ ಮುತ್ತು ಸ್ವಾಮಿ ರವರ ಖಾತೆಗೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಸಿ -17 ಎಂದು ಗುರುತಿಸಲಾಯಿತು. ನಿಪಿ 13 ಮತ್ತು ಈಗ ಗುರುತಿಸಿಕೊಂಡ ನಿಸಿ 17 ದಾಖಲಾತಿಗಳಲ್ಲಿ ವಾದಿ ಮುತ್ತುಸ್ವಾಮಿ ರವರ ತಂದೆಯ ಹೆಸರು ಮತ್ತು ಅವರಿಗೆ ಇರುವ ಇನ್ನೊಂದು ಹೆಸರಿನ ಬಗ್ಗೆ ನಮೂದು ಇರುವುದಿಲ್ಲ. ನಮ್ಮ ಬ್ಯಾಂಕ್ ನಲ್ಲಿ ಸದರಿ ರವರ ದಾಖಲಾತಿಗಳು ಇಲ್ಲದೆ ಇರುವ ಕಾರಣ ಎಲ್ಲಾ ಮಾಹಿತಿಯನ್ನು ನೀಡಲು ಆಗುತ್ತಿರುವುದಿಲ್ಲ. ನಾನು ಹಾಜರುಪಡಿಸಿದಂತಹ ನಿಸಿ 17 ರ ಖಾತೆಯು ಡಾರ್ಮೆಂಟ್ ಇನ್ ಆಕ್ಟಿವ್ ಆಗಿರುತ್ತದೆ.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದಃ**

ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಲು ಕೆಲವೊಂದು ನೀಡಿ ನಿಯಮಗಳು ಇರುತ್ತವೆ ಎಂದರೆ ಸರಿ. ಆ ಎಲ್ಲಾ ನೀತಿ ನಿಯಮಗಳ ಅಡಿಯಲ್ಲಿಯೇ ಖಾತೆಯನ್ನು ತೆರೆಯಲಾಗುತ್ತದೆ ಎಂದರೆ ಸರಿ. ಈ

ರೀತಿಯ ನೀತಿ ನಿಯಮಗಳು 2015 ರ ಹಿಂದಿನಿಂದಲೂ ಸಹ ಇರುತ್ತವೆ ಎಂದರೆ ಸರಿ. ಖಾತೆಯನ್ನು ತೆರೆಯುವ ಸಮಯದಲ್ಲಿ ಆಯಾ ವ್ಯಕ್ತಿಯ ಗುರುತಿನ ಚೀಟಿ ವಿಳಾಸಕ್ಕೆ ಸಂಬಂಧಿಸಿದಂತೆ ದಾಖಲಾತಿ ಮತ್ತು ಅವರ ಭಾವ ಚಿತ್ರ ತೆಗೆದುಕೊಳ್ಳಲಾಗುತ್ತದೆ ಎಂದರೆ ಸರಿ. ಖಾತೆ ತೆರೆಯ ಬಯಸುವವರ ಅರ್ಜಿಯನ್ನು ಪರಿಶೀಲಿಸಿ ಅದು ನಮ್ಮ ನೀತಿ ನಿಯಮದ ಅಡಿಯಲ್ಲಿ ಇರುತ್ತದೆ ಎಂದು ಖಾತ್ರಿ ಪಡಿಸಿಕೊಂಡು ಖಾತೆಯನ್ನು ತೆರೆಯಲಾಗುತ್ತದೆ ಎಂದರೆ ಸರಿ. ಖಾತೆಯನ್ನು ತೆರೆಯುವ ಬಯಸುವವವರು ಖುದ್ದಾಗಿ ಬ್ಯಾಂಕಿಗೆ ಬಂದು ತೆರೆಯಬೇಕಾಗುತ್ತದೆ ಎಂದರೆ ಸರಿ. ಖಾತೆ ತೆರೆಯ ಬಯುವ ವ್ಯಕ್ತಿಯು ಆತನ ಹೆಸರಿಗೆ ಸಂಬಂದಿಸಿದಂತೆ ದಾಖಾಲಾತಿಯನ್ನು ನೀಡಿದರೆ ಸಾಕು  ಖಾತೆಯನ್ನು ತೆರೆಯಲಾಗುತ್ತದೆ. ಮೂಾ ಲ ಹೆಸರು ಇರುವ ದಾಖಲಾತಿಯಂತೆ  ಖಾತೆಯನ್ನು ತೆರೆಯಲಾಗುತ್ತದೆ. ಮತ್ತು ಆಯಾ ವ್ಯಕ್ತಿಯ ಅಡ್ಡ ಹೆಸರು ನೀಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ.  ನಮ್ಮ ಬ್ಯಾಂಕ್ ನಲ್ಲಿ ಖಾತೆಯನ್ನು ತೆರೆಸಿ ನಂತರಅವರ ವೃಯಕ್ತಿಕ ಕಾರಣಗಳಿಂದಾಗ ಖಾತೆಯನ್ನು ಚಾಲ್ತಿಯಲ್ಲಿ ಇಡದೆ ಇರುವಂತಹ  ಹಲವಾರು ಖಾತೆಗಳು ಇರುತ್ತವೆ ಎಂದರೆ ಸರಿ. ಯಾವುದೇ ವ್ಯಕ್ತಿಯ ಖಾತೆಯು ಇನ್ ಆ್ಯಕ್ಟಿವ್ ಆದಲ್ಲಿ ಬ್ಯಾಂಕಿನವರೇ ಅಂತಹ ಖಾತೆಯನ್ನು ಕ್ಲೋಸ್ ಮಾಡುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಇನ್ ಆ್ಯಕ್ಟಿವ್  ಆದಂತಹ ಖಾತೆದಾರರು ಯಾವುದೇ ಸಮಯದಲ್ಲಿ ಖಾತೆಯನ್ನು ಮುಂದುವರಿಸಿಕೊಂಡು ಹೋಗಬಹುದು ಎಂದರೆ ಸಾಕ್ಷಿಯು ಅರ್ಜಿಯನ್ನು ನೀಡಿ ಮುಂದುವರಿಸಿಕೊಂಡು ಹೋಗಬಹುದು ಎಂದು ನುಡಿಯುತ್ತಾರೆ.

ಖಾತೆಯನ್ನು ತೆರೆಯುವ ಸಮಯದಲ್ಲಿ ಖಾತೆದಾರರ ಹೆಸರು ಮತ್ತು ಅವರ ತಂದೆಯ ಹೆಸರು ಸಹ ಮುಖ್ಯವಾಗಿರುತ್ತದೆ ಎಂದರ ಸರಿ. ನಿಪಿ 13

ರಂತೆ ಖಾತೆಯು ಎನ್ ಮುತ್ತುಸ್ವಾಮಿ  ಎಂಬ ಹೆಸರಿನಲ್ಲಿ  ಇರುತ್ತದ ಎಂದರೆ ಸರಿ. ಅದೇ ರೀತಿ ಸದರಿ ದಾಖಲಾತಿಯಲ್ಲಿ ಖಾತೆದಾರರ ಭಾವಚಿತ್ರ ಇರುತ್ತದ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ